ಅವರೆಲ್ಲಾ ಯಾವುದೋ ಕಾರಣಕ್ಕೆ ಪ್ರಶಸ್ತಿ ಹಿಂದಿರುಗಿಸಿ ಅದರ ಮರು ವಿತರಣೆಯಾಗುತ್ತಿದೆಯೇ? ಏನೇನೋ ಯೋಚನೆಗಳು ಒಂದರಹಿಂದೊಂದು ಒದ್ದುಕೊಂಡು ಬಂದವು. ಆತ ಹೇಳುತ್ತಲೇ ಇದ್ದ. 'ಪ್ರಶಸ್ತಿಯ ಅಂಗವಾಗಿ ನಿಮಗೆ ಶಾಲು, ಪ್ರಶಸ್ತಿಫಲಕ, ಮಂಗಮ್ಮನ ಪ್ರತಿಮೆಯ ಜೊತೆ ಪ್ರಶಸ್ತಿಯ ಮೊತ್ತವನ್ನೂ ನೀಡಲಾಗುವುದು. ಆಹ್ವಾನ ಪತ್ರಿಕೆ ಅಂಚೆಯ ಮೂಲಕ ನಿಮಗೆ ತಲಪುತ್ತದೆ. ಖಂಡಿತಾ ಬನ್ನಿ' ಎಂದರು. ನನಗೆ ಹೋಗಿದ್ದ ಪ್ರಜ್ಞೆ ಮರುಕಳಿಸಿತು. ದೃಢ ಪಡಿಸಿಕೊಳ್ಳಲು ಗಂಡನನ್ನು ಕೇಳಿದೆ. 'ಈಗ ಒಂದು ಫೋನ್ ಕರೆ ಬಂದಿತ್ತೇ? ನಾನು ಮಾತನಾಡಿದೆನೇ?'

'ಇದೇನು ಕೇಳೋ ಪ್ರಶ್ನೆನಾ? ಅರ್ಧ ಗಂಟೆ ಇಂದ ಫೋನ್ ಕಿವಿಗಿಟ್ಟು ನಿಂತಿದ್ದೀ? ಮೈ ಮನಸ್ಸು ಸರಿ ಇದೆ ತಾನೇ? ಇಲ್ದಿದ್ರೆ ಹೇಳು. ಡಾಕ್ಟರ ಬಳಿ ಹೋಗೋಣ' ಕಾಳಜಿ ತೋರಿಸಿದರು. ಸಂತಸದ ಸುದ್ದಿ ಹೇಳಿದೆ. ಸ್ವಲ್ಪವೂ ಹಿಗ್ಗಲಿಲ್ಲ ಪ್ರಾಣಿ. ಈಗ ಏಪ್ರಿಲ್ ತಿಂಗಳು ನಡೀತಾ ಇದೆ. ಯಾರೋ ಫೂಲ್ ಮಾಡಿರ್ಬೇಕು ಎನ್ನುತ್ತಾ ನನ್ನ ಸಂತಸಕ್ಕೆ ಕಡಿವಾಣ ಹಾಕಿದರು. ಆದರೆ ನಾಲ್ಕೇ ದಿನಗಳಲ್ಲಿ ಹನುಮೇಶಪ್ಪ ಅಂದಂತೆ ಆಹ್ವಾನ ಪತ್ರಿಕೆ ಕಳಿಸಿಯೇಬಿಟ್ಟರು. ಹದಿನೈದು ಪ್ರಶಸ್ತಿ ವಿಜೇತರ ಪಟ್ಟಿಯಲ್ಲಿ ನಾನೇ ಕೊನೆಯವಳು! ಮೊದಲನೆ ಬಹುಮಾನದ ನಿರೀಕ್ಷೆಯಲಿದ್ದವಳಿಗೆ ಸಮಾಧಾನಕರ ಬಹುಮಾನ ಬಂದಂತೆನಿಸಿತು! ಕೊನೆಯವಳಾದರೇನಾಯ್ತು? ಪ್ರಶಸ್ತಿ ಪ್ರಶಸ್ತಿಯೇ.

ಸಂತೋಷವನ್ನು ನಾಲ್ಕುಮಂದಿಗೆ ಹಂಚಬೇಕಂತೆ. ನಾನೂ ಹಂಚಿದೆ ಧಾರಾಳವಾಗಿ ನಲ್ವತ್ತು ಮಂದಿಗೆ. ಎಲ್ಲರೂ ಸಂತಸಪಟ್ಟರು. ಸಮಾರಂಭಕ್ಕೆ ಬರಲು ಉತ್ಸಾಹ ತೋರಿದರು ಕೂಡ. ಎಲ್ಲರೂ ಸಮೀಪದ ಬಂಧುಗಳೇ. ಮಾವ, ಭಾವ, ಚಿಕ್ಕಪ್ಪ, ಅಣ್ಣ, ಭಾವಮೈದುನ, ದೊಡ್ಡಮ್ಮ, ಚಿಕ್ಕತ್ತೆ, ಅತ್ತಿಗೆ ಇತ್ಯಾದಿ ಇತ್ಯಾದಿ. 'ಸಮಾರಂಭಕ್ಕೆ ಬರೋಕ್ಕೇನೋ ಮನಸ್ಸಿದೆ. ಆದ್ರೆ ಅಷ್ಟು ದೂರ ಬರೋದೂಂದ್ರೇ ಈ ಬೆಂಗ್ಳೂರು ಪೇಟೇಲಿ ಕಷ್ಟ. ನೀನು ವ್ಯಾನೋ ಮಿನಿ ಬಸ್ಸೋ ಗೊತ್ತುಮಾಡಿ ಕರ್ಕೊಂಡು ಹೋಗೋದಾದ್ರೆ... ಸಾಮೂಹಿಕವಾಗಿ ರಾಗ ಎಳದ್ರು. ಅವರು ಕೇಳೋದು ಹೆಚ್ಚೋ ನಾನು ವಾಹನ ಗೊತ್ತುಮಾಡೋದು ಹೆಚ್ಚೋ? ಒಂದು ಮಿನಿ ಬಸ್ಸನ್ನೇ ಗೊತ್ತುಮಾಡಿದೆ. ಮಾಡುವ ಕೆಲಸವನ್ನು ಅರ್ಧಂಬರ್ಧಮಾಡದೆ ತುಂಬು ಮನಸ್ಸಿನಿಂದ ಮಾಡಬೇಕಂತೆ. ನಗರದ ಮೂಲೆಮೂಲೆಯಿಂದ ಬರೋವ್ರು ಅವಸರದಲ್ಲಿ ತುತ್ತು ಉಂಡು ಬರೊದ್ಯಾಕೆ? ಇಷ್ಟಕ್ಕೂ ಪ್ರಶಸ್ತಿ ಹಗಲೆಲ್ಲಾ ಸಿಗುತ್ತದೆಯೇ? ಅಷ್ಟು ಮಂದಿಗೂ ನಮ್ಮಲ್ಲಿಯೇ ಊಟದ ವ್ಯವಸ್ಥೆ ಮಾಡಲು ಕೇಟರಿಂಗ್ ಕಸ್ತೂರಿಗೆ ಹೇಳಿದ್ದಾಯ್ತು. ಇದಕ್ಕೆ ನಮ್ಮಮನೆಯ ಅರ್ಥಸಚಿವರಿಂದ ಅಪಸ್ವರವೆದ್ದಿತು. 'ಬಸ್ಸು, ಊಟಕ್ಕೆ ಎಷ್ಟು ಖರ್ಚಾಗುತ್ತೆ ಏನ್ಕಥೆ ಅಂತ ಯೋಚಿಸಿದ್ದೀಯಾ?'

'ನನ್ಗೆ ಪ್ರಶಸ್ತಿ ಬಂದಿದೇಂತ ನಿಮ್ಗೆ ಹೊಟ್ಟೆಯುರಿ. ಹಣದಬಗ್ಗೆ ಯೋಚಿಸ್ಬೇಡಿ. ಪ್ರಶಸ್ತಿ ಹಣ ಕೈಸೇರಿದ ತಕ್ಷಣ ಖರ್ಚಾದ ಹಣ ಬಿಸಾಕ್ತೀನಿ' ಎಂದು ಜೋರುಮಾಡಿದೆ.

ನಿರೀಕ್ಷಿಸಿದ್ದ ದಿನ ಬಂದೇ ಬಿಡ್ತು. ನಿಗದಿತ ಸಮಯಕ್ಕೆ ಬಂಧು ಬಳಗದವರು ದಿಬ್ಬಣದಂತೆ ನಾನು ಗೊತ್ತುಮಾಡಿದ ಬಸ್ಸಿನಲ್ಲಿ ಬಂದಿಳಿದರು. ಊಟ ಮುಗಿಸಿ ಸಭಾಂಗಣ ಸೇರಿದೆವು. ಸಭಾಂಗಣ ಆಗಲೇ ಮುಕ್ಕಾಲು ತುಂಬಿತ್ತು. ಎಲ್ಲರೂ ಪ್ರಶಸ್ತಿವಿಜೇತರ ಬಂಧುಗಳೇ. ಮಿಕ್ಕಿದ್ದ ಕಾಲು ಭಾಗದ ಜಾಗವನ್ನು ನಮ್ಮ ಬಸ್ಸಿನಿಂದಿಳಿದ ಮಂದಿ ತುಂಬಿದರು. ಸಮಾರಂಭಕ್ಕೆ ಒಬ್ಬರು ಅಧ್ಯಕ್ಷರಾದರೆ ಹನ್ನೆರಡು ಮಂದಿ ವಿಶೇಷ ಅತಿಥಿಗಳು! ಎಲ್ಲರೂ ಪ್ರಭಾವೀ ವ್ಯಕ್ತಿಗಳೇ. ವೇದಿಕೆ ಅವರೆಲ್ಲರ ತೂಕದಿಂದ ಹೊಯ್ದಾಡಿತು.

ನಾವು ಒಳಗಡಿ ಇರಿಸಿದಾಗ ಮಾನ್ಯ ಹನುಮೇಶಯ್ಯನವರು ಸ್ವಾಗತ ಭಾಷಣ ಆರಂಭಿಸಿದ್ದರು. ಅಧ್ಯಕ್ಷರು ಹಾಗೂ ಹನ್ನೆರಡು ಅತಿಥಿಗಳನ್ನು ಅವರ ಪೂರ್ಣ ನಾಮಧೇಯ, ವೃತ್ತಿಪ್ರವೃತ್ತಿ, ಗಳಿಸಿದ